1. ಚುಕ್ಕೆ ಗುರುತಿನ ಪ್ರಶ್ನೆ ಕ್ರ ಸಂಖ್ಯೆ : 2746

2. ಸದಸ್ಯರ ಹೆಸರು : ಶ್ರೀ ಯೋಗಿಶ್ ಭಟ್.ಎನ್.(ಮಂಗಳೂರು)

3. ಉತ್ತರಿಸುವವರು : ಪಿ.ಜಿ.ಆರ್. ಸಿಂಧ್ಯ (ಮಾನ್ಯ ಬೃಹತ್.ಮಧ್ಯಮ. ಸಣ್ಣ ಕೈಗಾರಿಕೆ ಹಾಗೂ ಮೂಲಭೂತ ಸೌಕರ್ಯ ಸಚಿವರು)

ಕ್ರ.ಸಂ. ಪ್ರಶ್ನೆ

ಅ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಂಡವಾಳವನ್ನು ಹೂಡಿ ಭಾರಿ ಮತು ಮಧ್ಯಮ ಕೈಗಾರಿಕೆಗಳನ್ನು ಪ್ರಾರಂಭಿಸಲು ಎಷ್ಟು ಉದ್ಯಮಗಳು ಮನವಿ ಸಲ್ಲಿಸಿವೆ.

ಉತ್ತರ

ಅ. ಕಳೆದ 5 ವರ್ಷಗಳ ಅವಧಿಯಲ್ಲಿ (1–4–2001 ರಿಂದ 28–2–2005ರ ಅವಧಿಯಲ್ಲಿ) 16 ಕೈಗಾರಿಕಾ ಯೋಜನೆಗಳನ್ನು ಸ್ಥಾಪಿಸಲು ಪ್ರಸ್ತಾಪಿಸಲಾಯಿತು.

ಕ್ರ.ಸಂ. ಪ್ರಶ್ನೆ

ಆ. ಎಷ್ಟು ಉದ್ಯಮಗಳನ್ನು ಪ್ರಾರಂಭಿಸಲು ಸರ್ಕಾರ ಸಮ್ಮತಿಸಿದೆ ಅವುಗಳಿಗೆ ಯಾವ ಪ್ರಮಾಣದ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಸರ್ಕಾರ ಯೋಚಿಸಿದೆ.

ಉತ್ತರ

ಆ. ಮೇಲ್ಕಂಡ ಅವಧಿಯಲ್ಲಿ ರೂ.21.324 ಕೋಟಿ ಬಂಡವಾಳ ಹೂಡಿಕೆಯಲ್ಲಿ 5 ಯೋಜನೆಗಳಿಗೆ ಉನ್ನತ ಮಟ್ಟದ ಸಮಿತಿಯಿಂದ ಅನುಮೋದನೆ ನೀಡಲಾಗಿದ್ದು. ಈ ಯೋಜನೆಗಳಿಗೆ ಒಟ್ಟು 953.54 ಎಕರೆ ಜಮೀನು ಅಗತ್ಯವಿದೆ. ಇದರಲ್ಲಿ 59 ಎಕರೆ ಉದ್ಯಮದಾರರು ಹೊಂದಿದ್ದಾರೆ ಹಾಗೂ 140 ಎಕರೆ ಮಂಗಳೂರು ಬಂದರಿಗೆ ಸೇರಿದೆ ಜಮೀನನ್ನು ಬಳಸಿಕೊಳ್ಳಲಾಗುವುದು ಮತ್ತು 754.54 ಎಕರೆ ಜಮೀನನ್ನು ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ವತಿಯಿಂದ ಒದಗಿಸಬೇಕಾಗಿದೆ.

ರಾಜ್ಯ ಮಟ್ಟದ ಏಕಗಾವಕ್ಷಿ ಸಮಿತಿ ವತಿಯಿಂದ ರೂ.240.43 ಕೋಟಿ ಬಂಡವಾಳ ಹೂಡಿಕೆಯ 11 ಯೋಜನೆಗಳಿಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಗಳಿಗೆ ಅಗತ್ಯವಿರುವ 72.21 ಎಕರೆ ಜಮೀನನ್ನು ಮಂಡಳಿಯಿಂದ ಹಾಲಿ ಅಭಿವೃದ್ಧಿ ಪಡಿಸಲಾದ ಕೈಗಾರಿಕಾ ಪ್ರದೇಶದಲ್ಲಿ ನೀಡಲಾಗುವುದು.

ಕ್ರ.ಸಂ.	ಪ್ರಶ್ನೆ
ಇ.	ವಿದ್ಯುತ್ ಉತ್ಪಾದನಾ ಕ್ಷೇತ್ರದಲ್ಲಿ ಬಂಡವಾಳ ಹೂಡಲು ಯಾವ ಯಾವ ಕೈಗಾರಿಕಾ ಸಂಸ್ಥೆಗಳು ಮುಂದಾಗಿವೆ.

ಉತ್ತರ

ಮೆ:ಎಂ.ಆರ್.ಪಿ.ಎಲ್. ಮೆ:ಬೋರೂಕ ಪವರ್ ಕಾರ್ಪೋರೇಷನ್ ಮತ್ತು ಮೆ: ಪ್ರಸನ್ನ ಪವರ್ ನಿಯಮಿತ ಕಂಪನಿಗಳು ವಿದ್ಯುತ್‌ಚ್ಛಕ್ತಿ ಉತ್ಪಾದನ ಘಟಕಗಳನ್ನು ಸ್ಥಾಪಿಸಲು ಮುಂದು ಬಂದಿವೆ. ಯೋಜನೆಗಳಿಗೆ

ಕ್ರ.ಸಂ.	ಪ್ರಶ್ನೆ
ಈ.	ಯಾವ ಸಂಸ್ಥೆಗಳಿಗೆ ಸರ್ಕಾರ ಅನುಮತಿ ನೀಡಿದೆ (ವಿವರ ನೀಡುವುದು)?

ಉತ್ತರ

ಈ ಕೆಳಕಂಡ ಯೋಜನೆಗಳಿಗೆ ಅನುಮತಿ ನೀಡಲಾಗಿದೆ.

1. ಎಂ.ಆರ್.ಪಿ.ಎಲ್. 2000 MW
2. ಬೋರೂಕ ಪವರ್ ಕಾರ್ಪೋರೇಷನ್ 2 x 4.5 MW
3. ಪ್ರಸನ್ನ ಪವರ್ ನಿಯಮಿತ 6 MW

ಶ್ರೀ ಎನ್.ಯೋಗಿಶ್ ಭಟ್:– ಸನ್ಮಾನ್ಯ ಅಧ್ಯಕ್ಷರೆ. ವಿಶೇಷವಾಗಿ 25 ಸಾವಿರ ಕೋಟಿ ಬಂಡವಾಳ ಎಂಆರ್‌ಪಿಎಲ್. ಒಎನ್‌ಜಿಸಿ ಮೂಲಕ ಹೂಡಿಕೆಯಾಗುವುದನ್ನು ಯಾವುದೇ ಕಾರಣಕ್ಕಾಗಿ ಹಿಂದಕ್ಕೆ ಹೋಗದ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂಬುದು. ಇನ್ನು ಎರಡನೆಯದಾಗಿ ಪವರ ಜನರೇಷನ್‌ಗೆ ಸಂಬಂಧಪಟ್ಟ ಹಾಗೆ. ಎಂಆರ್‌ಪಿಎಲ್‌ಗೆ ಎರಡು ಸಾವಿರ ಮೆಗಾವ್ಯಾಟಿಗೆ ಅನುಮತಿಯನ್ನು ಪಡೆದುಕೊಂಡಿದ್ದಾರೆ. ಈಗ ನಮಗೆ ಲೇಟೆಸ್ಟ್ ಸಿಕ್ಕಿರುವಂತಹ ಮಾಹಿತಿ ಒಎನ್‌ಬಿಸಿ. ಎಂಆರ್ ಪಿಎಲ್ ಕಡೆಯಿಂದ 23 ಪರ್ಸೆಂಟ್ ಬಂಡವಾಳ ಹೂಡಿಕೆಗೆ ಮಾತ್ರ ಅನುಮತಿಯನ್ನು ಕೊಟ್ಟಿದ್ದಾರೆನ್ನುವಂತಹ ಹಿನ್ನೆಲೆಯಲ್ಲಿ ಸುಮಾರು 8 ಸಾವಿರ ಕೋಟಿಯಷ್ಟು ಬೇಕಿದ್ದರೆ 2000 ಕೋಟಿಗೆ ಮಾತ್ರ ಅನುಮತಿಯನ್ನು ಕೊಟ್ಟಿದ್ದಾರೆ. ಉಳಿದ 6000 ಕೋಟಿಯನ್ನು ಇನ್ನಿತರ ಸಂಸ್ಥೆಗಳ ಮೂಲಕ ಅದನ್ನು ತರುವುದಕ್ಕೆ ಗ್ಲೋಬಲ್ ಇನ್‌ವೆಸ್ಟ್‌ಮೆಂಟ್ ಆಗುವಂತಹ ನಿಟ್ಟಿನಲ್ಲಿ ತಾವು ಆಸಕ್ತಿಯನ್ನು ವಹಿಸಿ ಆಗುವ ರೀತಿಯಲ್ಲಿ ಕ್ರಮವನ್ನು ತೆಗೆದುಕೊಳ್ಳುತ್ತೀರಾ ಎಂದು ನನ್ನ ವಿನಂತಿ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಮಾನ್ಯ ಅಧ್ಯಕ್ಷರೆ. ಮಾನ್ಯ ಸದಸ್ಯರು ಒಎನ್‌ಜಿಸಿ ಪ್ರಶ್ನೆಯನ್ನು ಕೇಳುತ್ತಿದ್ದೀರಿ. ಅವರು ಕರ್ನಾಟಕ ಸರ್ಕಾರದ ಜೊತೆಯಲ್ಲಿ ಕಳೆದ ಎರಡು ವರ್ಷಗಳಲ್ಲಿ ಮಾಡಿರತಕ್ಕಂತಹ ಸತತ ಪ್ರಯತ್ನದಿಂದಾಗಿ ಸುಮಾರು 25 ಸಾವಿರ ಕೋಟಿ ರೂಪಾಯಿಗಳಷ್ಟು ಇನ್‌ವೆಸ್ಟ್‌ಮೆಂಟ್ ಮಾಡುವುದಕ್ಕೆ ಒಪ್ಪಿಕೊಂಡಿದ್ದಾರೆ. MRPL has become a part of ONGC. ತಮಗೆ ಗೊತ್ತಿದೆ. ಇದರ ಜೊತೆಗೆ ಒಂದು ಎಕಾನಾಮಿಕ್ ಜೋನನ್ನು ಸಹಿತ ಕೆನರಾ ಛೇಂಬರ್ಸ್ ಆಫ್ ಕಾಮರ್ಸ್‌ರವರು ಒಎನ್‌ಜಿಸಿಯವರು ಮತ್ತು ಸ್ಟೇಟ್ ಗೌರ್ನಮೆಂಟ್‌ನವರು ಸೇರಿಸಿ ಒಂದು ಸ್ಪೆಷಲ್ ಎಕಾನಾಮಿಕ್ ಜೋನ್ ಮಾಡುವುದಕ್ಕಾಗಿ ಒಪ್ಪಿಕೊಂಡಿರುವಂತಹದು ತಮಗೆ ಗೊತ್ತಿರುವಂತಹ ವಿಚಾರವಾಗಿದೆ. ಒಎನ್‌ಜಿಸಿಯಲ್ಲಿ ಇನ್‌ವೆಸ್ಟ್‌ಮೆಂಟ್‌ನ್ನು ಯಾವುದೇ ಕಾರಣಕ್ಕೂ ಸಹಿತ ಈಗಾಗಲೇ ಮಾನ್ಯ ಮುಖ್ಯಮಂತ್ರಿಗಳು. ಮತ್ತು ಉಪಮುಖ್ಯಮಂತ್ರಿಗಳು ನಾವೆಲ್ಲರೂ ಸಹಿತ ಕೇಂದ್ರಸರ್ಕಾರದಲ್ಲಿ ಕರ್ನಾಟಕದವರು 3 ಜನರು ಮಂತ್ರಿಗಳಿದ್ದಾರೆ.

ಮಾನ್ಯ ಆಸ್ಕರ್‌ಫರ್ನಾಂಡಿಸ್‌ರವರು. ಎಂ.ವಿ.ರಾಜಶೇಖರನ್. ಮತ್ತು ಶ್ರೀ.ಕೆ.ಹೆಚ್. ಮುನಿಯಪ್ಪನವರು ಇದ್ದಾರೆ. ಮತ್ತು ಲೋಕಸಭಾ ಸದಸ್ಯರುಗಳು ನಾವೆಲ್ಲರೂ ಸಾಕಷ್ಟು ನಿಯೋಗಗಳಲ್ಲಿ ಹೋಗಿ ಮಾನ್ಯ ಪ್ರಧಾನಮಂತ್ರಿಗಳನ್ನು ಮತ್ತು ಇತರ ಸಂಬಂಧಪಟ್ಟಂತಹ ಸಚಿವರನ್ನು ಸಹಿತ ಭೇಟಿ ಮಾಡಿ ನಮಗೆ ಏನು ಇನ್‌ಪ್ರಿನ್ಸಿಪಲ್.ಒಎನ್‌ಜಿಸಿಯವರು ಮುಂಚೇ ಅಗ್ರಿಮೆಂಟ್ ಎಂಒಯು ಮಾಡಿಕೊಂಡಿದ್ದಾರೆ. ಅದು ಡೈಲ್ಯೂಟ್ ಆಗದೆ ಇರುವಂತಹ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ನಾವು ಒತ್ತಾಯವನ್ನು ತಂದಿದ್ದೇವೆ. ಯಾವುದೇ ಕಾರಣಕ್ಕೂ ಸಹಿತ ಅದು ಬೇರೆ ಕಡೆಗೆ ಆಗದೆ ಇರುವ ಹಾಗೆ ನಾವು ನೋಡುತ್ತೇವೆ ಎನ್ನುವಂತಹ ಭರವಸೆಯನ್ನು ಈ ಸಂದರ್ಭದಲ್ಲಿ ನಾವು ಇದನ್ನು ಪಕ್ಷಾತೀತವಾಗಿ ನೋಡತಕ್ಕಂತಹ ವಿಚಾರವಾಗಿದೆ. ನಾವು ಮಾಡುತ್ತೇವೆ ಎನ್ನುವುದು ಸಹಿತ ಈ ಸಂದರ್ಭದಲ್ಲಿ ರಾಜ್ಯದ ಜನತೆಗೆ ಏಕೆಂದರೆ ಒಎನ್‌ಜಿಸಿ ಬರುವುದರಿಂದ ನಮ್ಮ ರಾಜ್ಯದ ಆರ್ಥಿಕ ಕ್ಷೇತ್ರದಲ್ಲಿ ತೆರಿಗೆಗಳು ರೂಪದಲ್ಲಿ ಡೈರೆಕ್ಟ್ ಎಂಪ್ಲಾಯಿಮೆಂಟ್. ಇನ್‌ಡೈರೆಕ್ಟ್ ಎಂಪ್ಲಾಯಿಮೆಂಟ್ ಬಹಳ ಉಪಯೋಗವಾಗುತ್ತದೆ. ವಿಲ್ ಆಕ್ಚ್ಯುಯಲಿ ಇಡೀ ನಮ್ಮ ರಾಜ್ಯದ ಅರ್ಥ ವ್ಯವಸ್ಥೆಗೆ ಬಹಳ ದೊಡ್ಡ ಶಕ್ತಿಯನ್ನು ಕೊಡುವಂತಹ ಯೋಜನೆಯಾಗಿದೆ. ಇದರ ಬಗ್ಗೆ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ಇದಕ್ಕೆ ಫುಲ್ ಆಗಿ ಏನು ಒಪ್ಪಿಕೊಂಡಿದ್ದಾರೆ ಇದನ್ನು ಇಂಪ್ಲಿಮೆಂಟ್

ಮಾಡಬೇಕಾಗುತ್ತದೆ. ಅದರ ಬಗ್ಗೆ ಹಿಂದೆ ಸರಿಯುವುದಿಲ್ಲ ಎನ್ನತಕ್ಕಂಥಹ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತೇನೆ. ಅನೇಕ ಒತ್ತಡಗಳಿಂದ ಕೆಲಸ ಮಾಡುತ್ತೇವೆ ಎನ್ನತಕ್ಕಂತಹದ್ದನ್ನು ನಾನು ಕೇಳಲ್ಪಟ್ಟಿದ್ದೇನೆ. ನಾವಂತೂ ಅವಕಾಶವನ್ನು ಇದು ಕನ್ನಡನಾಡಿನ ಭವಿಷ್ಯದ ಪ್ರಶ್ನೆಯಾಗಿದೆ. ಅದನ್ನು ನಾವು ಬಿಟ್ಟುಕೊಡುವುದಿಲ್ಲ. ಎಂಬ ಮಾತನ್ನು ಹೇಳುತ್ತೇನೆ. ಈ ಒಎನ್‌ಜಿಸಿ ಮತ್ತು ಎಂಆರ್‌ಎಲ್‌ಪಿಗೆ ಸಂಬಂಧಪಟ್ಟ ಹಾಗೆ ತಾವು ಕೆಲವೊಂದು ಡಿಟೇಲ್ಸ್‌ನ್ನು ಕೇಳಿದ್ದೀರಿ. ನಾನು ಅದನ್ನು ನಿಮಗೆ ಖಾಸಗಿಯಾಗಿ ಪ್ರತ್ಯೇಕವಾಗಿ ಕಳುಹಿಸಿಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : ವಿಶೇಷವಾಗಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿ ಮಾಡುವಂತಹ ದೃಷ್ಟಿಯಲ್ಲಿ ಅಸೈಡ್‌ಸ್ಕೀಂ 17ವರೇ ಕೋಟಿ ರೂಪಾಯಿಗಳಷ್ಟು ಮಂಜೂರಾಗುತ್ತಿದೆ. ಕೇವಲ 4 ಕೋಟಿ ರೂಪಾಯಿಗಳು ಮಾತ್ರ ನಮಗೆ ಮಂಗಳೂರು ಮಹಾನಗರಪಾಲಿಕೆಗೆ ಸಿಕ್ಕಿದೆ. ಈ ಒಂದು ರಸ್ತೆ ಅಭಿವೃದ್ಧಿಯ ಬಗ್ಗೆ. ನಮಗೆ ಇನ್ನು 13ವರೇ ಕೋಟಿ ರೂಪಾಯಿಗಳು ಬಿಡುಗಡೆಯಾಗಿಲ್ಲ. ಈ ನಿಟ್ಟಿನಲ್ಲಿ ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ನನ್ನ ವಿನಂತಿ.

ಶ್ರೀ ಪಿ.ಜಿ.ಆರ್.ಸಿಂಧ್ಯಾ: ಈ ಅಸೈಡ್ ಸ್ಕೀಂನಲ್ಲಿ ನಮ್ಮ ರಾಜ್ಯಕ್ಕೆ ಅನ್ಯಾಯವಾಗುತ್ತಿದೆ. ಹೇಗೆಂದರೆ. ರಾಜ್ಯದಿಂದ ಅಸೈಡ್ ಅಸಿಸ್ಟೆನ್ಸ್ ಕೇಂದ್ರ ಸರ್ಕಾರದವರದು ಇನ್‌ಫ್ರಾಸ್ಟ್ರಕ್ಚರ್‌ನ್ನು ಡೆವಲಪ್ ಮಾಡುವುದಕ್ಕೆ ಕೊಡತಕ್ಕಂತಹ ಹಣವಾಗಿದೆ. ಎಲ್ಲೆಲ್ಲಿ ನಮ್ಮ ಯೂನಿಟ್ ಎಕ್ಸ್‌ಪೋರ್ಟ್ ಮಾಡತಕ್ಕಂತಹದ್ದು ಇವೆ. ತಂಬಾಕಿನಿಂದ ಹಿಡಿದು ಮೆಷಿನ್ ಟೂಲ್‌ನಿಂದ ಹಿಡಿದು ಸಾಫ್ಟ್‌ವೇಟಿಗೂ ಸಹಿತ ನಾವು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಕರ್ನಾಟಕ ರಾಜ್ಯದಲ್ಲಿ ಕಳೆದ ವರ್ಷದವರೆಗೂ ಪ್ರತಿ ವರ್ಷ 42 ಸಾವಿರ ಕೋಟಿ ರೂಗಳನ್ನು ಎಕ್ಸ್‌ಪೋರ್ಟ್ ಆಗುತ್ತಿದೆ. ಈ ವರ್ಷ 50 ಸಾವಿರ ಕೋಟಿಯಷ್ಟು ಎಕ್ಸ್‌ಪೋರ್ಟ್ ಆಗುತ್ತಿದೆ. ಆದರೆ ನಮಗೆ ಬರತಕ್ಕಂತಹ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್ ಮಾಡುವುದಕ್ಕಾಗಿ ಬರತಕ್ಕಂತಹ ಫಂಡ್ಸ್ ಏನಿದೆ. ಅದು ಸುಮಾರು 15–20 ಕೋಟಿಯಷ್ಟು ಬರುತ್ತದೆ. ಅದರಲ್ಲಿ ಏನು ಮಾಡಿದ್ದಾರೆಂದರೆ ಸಾಫ್ಟ್‌ವೇರ್‌ನ್ನು ಏನು ಎಕ್ಸ್‌ಪೋರ್ಟ್ ಮಾಡುತ್ತಿದ್ದೇವೆ. ಅದನ್ನು ಕನ್ಸಿಡರೇಷನ್ ಮಾಡುತ್ತಿಲ್ಲ. ನಾವು ಕೇಂದ್ರ ಸರ್ಕಾರದ ಮೇಲೆ ಮೊನ್ನೆ ಸಹಿತ ಲೋಕಸಭಾ ಸದಸ್ಯರುಗಳು ಹಾಗೂ ಮುಖ್ಯಮಂತ್ರಿಗಳು ಕರೆದಂತಹ ಸಭೆಯಲ್ಲಿ ನಾವು ಲೋಕಸಭಾ ಸದಸ್ಯರುಗಳಿಗೆ ತಿಳಿಸಿದ್ದೇವೆ. ಇದರಿಂದಾಗಿ ಕರ್ನಾಟಕಕ್ಕೆ ಅನ್ಯಾಯವಾಗುತ್ತಿದೆ. ನಾವು 50 ಸಾವಿರ ಕೋಟಿ ಎಕ್ಸ್‌ಪೋರ್ಟ್

ಮಾಡಿದವರಿಗೂ ಕೂಡ 20 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಬಾಕಿ ನಾವು ಎಕ್ಸ್‌ಪೋರ್ಟ್ ಮಾಡುತ್ತಿರುವಂತಹ 20 ಸಾವಿರ ಕೋಟಿ ರೂಪಾಯಿಯನ್ನು ನೀವು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿಲ್ಲ. ಇನ್ನು 25–30 ಕೋಟಿ ನಮಗೆ ಹೆಚ್ಚಿಗೆ ಬರುತ್ತದೆ. ಎಂದು ನಾನು ಒತ್ತಾಯವನ್ನು ಮಾಡಿದ್ದೇನೆ. ಇದನ್ನು ಕೊಡಬಹುದೆಂದು ಎಂದು ನನಗಿಸುತ್ತದೆ. ಈ ಮಧ್ಯ ತಾವು 2–3 ವರ್ಷದ ಹಿಂದೆ ಒಂದು ರಸ್ತೆಗೆ ತಾವು 15 ಕೋಟಿ ರೂಪಾಯಿಗಳನ್ನು ತಾವು ರಿಲೀಸ್ ಮಾಡಿದ್ದೀರಿ. ಸ್ಯಾಂಕ್ಷನ್ ಮಾಡಿಸಿಕೊಂಡು ಬಂದು ಅದರಲ್ಲಿ 3–4 ಕೋಟಿ ರಿಲೀಸ್ ಆಗಿದೆ ಉಳಿದಿರುವುದು ಆಗಿಲ್ಲ. ಕೇಂದ್ರಸರ್ಕಾರದಿಂದ ಹಣ ಬಂದಹಾಗೆ ಎಲ್ಲಾ ನಾನು ಅದಕ್ಕೆ ಆದ್ಯತೆಯನ್ನು ಕೊಟ್ಟು ಪರಿಶೀಲನೆಯನ್ನು ಮಾಡುತ್ತೇನೆಂಬ ಭರವಸೆಯನ್ನು ಕೊಡುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ : 65 ಸಾವಿರ ಕೋಟಿಯ ವಿಶೇಷ ಒಂದು ಯೋಜನೆಯನ್ನು ತಾವು ಘೋಷಣೆ ಮಾಡಿದ್ದೀರಿ. ಮಂಗಳೂರು ವಿಶೇಷ ಆರ್ಥಿಕ ವಲಯಕ್ಕೆ ಪ್ರಯತ್ನ ಪಡುತ್ತಿದ್ದೀರಾ. ಅದು ಯಾವ ಹಂತದಲ್ಲಿದೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ: ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಅದಕ್ಕೆ ಉತ್ತರವನ್ನು ಕೊಡುತ್ತೇನೆ.

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	**2333**
2. ಸದಸ್ಯರ ಹೆಸರು	:	**ಶ್ರೀ ವಿಶ್ವೇಶ್ವರ ಹೆಗಡೆ (ಕಾಗೇರಿ)**
3. ಉತ್ತರಿಸುವವರು	:	**ಪಿ.ಜಿ.ಆರ್.ಸಿಂಧ್ಯ (ಕೈಗಾರಿಕೆ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು)**

ಕ್ರ.ಸಂ. ಪ್ರಶ್ನೆ

ಅ) ಹುಬ್ಬಳ್ಳಿ ಅಂಕೋಲ ರೈಲ್ವೆ ಮಾರ್ಗದ ಕಾಮಗಾರಿ ಯಾವ ಹಂತದಲ್ಲಿದೆ ಹಾಗೂ ಈ ಭಾಗದ ಬ್ರಾಡ್‌ಗೇಜ್ ಪರಿವರ್ತನೆ ಕಾರ್ಯ ಪ್ರಗತಿಯಲ್ಲಿದೆಯೇ?

ಉತ್ತರ

ಹುಬ್ಬಳ್ಳಿ ಅಂಕೋಲ ಬ್ರಾಡ್ ಗೇಜ್ ಮಾರ್ಗ ಹೊಸ ಯೋಜನೆಯಾಗಿರುತ್ತದೆ. ಹುಬ್ಬಳ್ಳಿಯಿಂದ 33 ಕಿ.ಮಿ.ವರೆಗಿನ ಮಾರ್ಗದಲ್ಲಿ ಸಣ್ಣ ಸೇತುವೆಗಳು ಮತ್ತು